ಇ.ಸಿ.ಎ. 1/2019,                    ಪಿ.ಡಬ್ಲ್ಯೂ.5        ಹೆಸರುಃ ಶ್ರೀನಿವಾಸ

**ದಿಃ08-07-2026 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲು : 1 ನೇ ಎದುರುದಾರರ ಪರ ಶ್ರೀ ಹೆಚ್.ಆರ್.ಎಸ್. ವಕೀಲರಿಂದಃ**

ನಾನು 10 ನೇ ತರಗತಿಯವರೆಗೆ ವ್ಯಾಸಂಗ ಮಾಡಿದ್ದೇನೆ. ಅರ್ಜಿದಾರರಾದ ಸಂತೋಷ ನನ್ನ ಚಿಕ್ಕಪ್ಪನ ಮಗ ಎಂದರೆ ಸರಿ. ಸಂತೋಷ ವ್ಯವಸಾಯದ ಕೆಲಸವನ್ನು ಮಾಡುತ್ತಾನೆ ಎಂದರೆ ಸರಿ. ಸಂತೋಷರವರ ತಂದೆಗೆ ಚೀರನಹಳ್ಳಿ ಗ್ರಾಮದಲ್ಲಿ ಸಾಕಷ್ಟು ಜಮೀನು ಇದೆ ಎಂದರೆ ಸರಿ. ನಾನು ಈ ಹಿಂದೆ ಬೆಂಗಳೂರಿನಲ್ಲಿ ಕೆಲಸ ಮಾಡಿಕೊಂಡು ಇದ್ದೆನು ಎಂದರೆ ಸರಿ. ನಾನು ಆಟೋ ಚಾಲಕನಾಗಿ ಕಂಪನಿಗಳಲ್ಲಿ ಕೆಲಸ ಮಾಡುತ್ತಿದ್ದೆನು. ನಾನು 2019-20 ನೇ ಸಾಲಿನವರೆಗೂ ಬೆಂಗಳೂರಿನಲ್ಲಿಯೇ ಇದ್ದೆನು ಎಂದರೆ ಸರಿ. ನಾನು ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದಾಗ, ಯಾವ ಯಾವ ದಿನ ಕೆಲಸ ಮಾಡಿದ್ದೇನೆ ಎಂಬ ಬಗ್ಗೆ ಹಾಜರಾತಿಯ ಕುರಿತು ದಾಖಲಾತಿ ಇರುತ್ತದೆ ಎಂದರೆ ಸರಿ. ದಿ.26.06.2018 ರಂದು ನಾನು ಬೆಂಗಳೂರಿನಲ್ಲಿಯೇ ಕೆಲಸ ಮಾಡಿಕೊಂಡು ಇದ್ದೆನು ಎಂದರೆ ಸರಿ.

2. ಅಪಘಾತ ದಿನಾಂಕ 26.10.2018 ರಂದು ಆಗಿರುತ್ತದೆ. ನಾನು ಸಲ್ಲಿಸಿರುವ ಸಾಕ್ಷ್ಯದ ಪ್ರಮಾಣ ಪತ್ರದಲ್ಲಿನ ವಿಚಾರಗಳ ಕುರಿತು ನನಗೆ ಮಾಹಿತಿ ಇದೆ. ಸರ್ವೆ ನಂ.27/5 ರಲ್ಲಿ ನಮ್ಮ ಕುಟುಂಬಕ್ಕೆ 5 ಎಕರೆ ಜಮೀನು ಇದೆ. 1 ನೇ ಎದುರುದಾರರ ಜಮೀನಿನ ಸರ್ವೆ ನಂಬರ್ ಗೊತ್ತಿಲ್ಲ. ನಮ್ಮ ಮತ್ತು 1 ನೇ ಎದುರುದಾರರ ಜಮೀನಿನ ನಡುವೆ ಒಂದು ಜಮೀನು ಇದೆ. ನಮ್ಮ ಜಮೀನಿಗೆ ಹೊಂದಿಕೊಂಡಂತೆ ಅರ್ಜಿದಾರರಾದ ಸಂತೋಷರವರ ಜಮೀನು ಸಹ ಇದೆ ಎಂದರೆ ಸರಿ. ಸಂತೋಷರವರ ಮಾವ ಮಂಜಣ್ಣ ಎಂಬುವವರು ಜೈಪುರದಲ್ಲಿ ಇದ್ದಾರೆ ಎಂದರೆ ಸರಿ. ಸಂತೋಷ ಅವರ ಮಾವನ ಮನೆಯಲ್ಲಿಯೇ ಇದ್ದುಕೊಂಡು ವ್ಯವಸಾಯ ಮಾಡಿಕೊಂಡು ಇದ್ದನು.

3. ಘಟನೆಯ ಅರ್ಧ ದಿಂದ ಒಂದು ಗಂಟೆಯ ನಂತರದಲ್ಲಿ ನಾನು ಸ್ಥಳಕ್ಕೆ ಹೋದೆನು. ನಾನು ಘಟನೆಯನ್ನು ಖುದ್ದಾಗಿ ನೋಡಿಲ್ಲ ಎಂದರೆ ಸರಿ. ಅರ್ಜಿದಾರರಾದ ಸಂತೋಷ ರವರು ಟ್ರಾಕ್ಟರ್‌ನ ಮೇಲೆ ನಿಂತು ಹಗ್ಗ ಎಳೆಯುವಾಗ ಹಗ್ಗ ತುಂಡಾಗಿ ಬಿದ್ದು ಪೆಟ್ಟಾಗಿರುವುದಾಗಿ ತಿಳಿಯಿತು. ಅರ್ಜಿದಾರರಿಗೆ ಬೈಕು ಡಿಕ್ಕಿಪಡಿಸಿ ಗಾಯಗೊಂಡಿರುವುದಾಗಿ ದೂರು ದಾಖಲಾಗಿತ್ತು ಎಂದರೆ ಸಾಕ್ಷಿ ಸುಳ್ಳು ದೂರು ದಾಖಲಾಗಿತ್ತು ಎಂದು ಹೇಳುತ್ತಾರೆ. ನಾನು ಘಟನೆಯ ಕುರಿತು ಪೊಲೀಸರಿಗೆ ಮಾಹಿತಿಯನ್ನು ನೀಡಿರುತ್ತೇನೆ ಮತ್ತು ಸಹಿಯನ್ನು ಸಹ ಮಾಡಿರುತ್ತೇನೆ. ಪೊಲೀಸರು ಯಾವ ದಿನಾಂಕದಂದು ಬಂದಿದ್ದರು ಎಂದು ಗೊತ್ತಿಲ್ಲ.

ನಾನು ತನಿಖಾಧಿಕಾರಿಗೆ 1 ನೇ ಆರೋಪಿತರು ಸಂತೋಷರವರನ್ನು ಕರೆದುಕೊಂಡು ಹೋಗಿದ್ದು, ಟ್ರಾಕ್ಟರ್‌ನ ಮೇಲೆ ನಿಂತು ಹಗ್ಗ ಎಳೆಯುತ್ತಿದ್ದಾಗ, ಹಗ್ಗ ತುಂಡಾಗಿ ಬಿದ್ದು ಸಂತೋಷರವರಿಗೆ ಪೆಟ್ಟಾಗಿತ್ತು ಎಂದು ಹೇಳಿಕೆಯನ್ನು ನೀಡಿರುತ್ತೇನೆ. ನಾನು ನೀಡಿರುವ ಹೇಳಿಕೆಯಲ್ಲಿ ಹಗ್ಗ ಸಡಿಲಗೊಳಿಸಿದ್ದರಿಂದ, ಸಂತೋಷರವರು ಬಿದ್ದಿರುತ್ತಾರೆ ಎಂದು ಹೇಳಿಲ್ಲ. ಹಗ್ಗದ ಎಳೆಗಳು ಬಿಚ್ಚಿಕೊಂಡಾಗ ಆಕಸ್ಮಿಕವಾಗಿ ಕೂಡ ಹಗ್ಗ ತುಂಡಾಗುವ ಸಾದ್ಯತೆ ಇದೆ ಎಂದರೆ ಸಾಕ್ಷಿ ಹಗ್ಗವನ್ನು ಜೋರಾಗಿ ಎಳೆದ ಕಾರಣ ತುಂಡಾಗಿರುತ್ತದೆ ಎಂದು ಹೇಳುತ್ತಾರೆ. ಸಂತೋಷರವರಿಗೆ ಸಾಕಷ್ಟು ಜಮೀನು ಇದ್ದಿದ್ದರಿಂದ, ಕೂಲಿ ಕೆಲಸಕ್ಕೆ ಹೋಗುತ್ತಿರಲಿಲ್ಲ ಎಂದರೆ ಸರಿಯಲ್ಲ.

4. 1 ನೇ ಎದುರುದಾರರು ಸಂತೋಷರವರನ್ನು ಮದ್ಯಾಹ್ನ 2 ಗಂಟೆಗೆ ಕೆಲಸಕ್ಕೆ ಕರೆದುಕೊಂಡು ಹೋಗಿದ್ದರು. ಅರ್ಜಿದಾರರು ಮತ್ತು ಆತನ ತಾಯಿ ಹೊಲದಲ್ಲಿ ಕೆಲಸ ಮಾಡುತ್ತಿದ್ದಾಗ, 1 ನೇ ಎದುರುದಾರರು ಬಂದು ಅರ್ಜಿದಾರರಾದ ಸಂತೋಷರವರನ್ನು ಕರೆದುಕೊಂಡು ಹೋಗಿರುತ್ತಾರೆ. 1 ನೇ ಎದುರುದಾರರಿಗೆ ಸೇರಿದ ವಿವಾದಿತ ಘಟನಾ ಸ್ಥಳದ ಚೆಕ್ಕುಬಂದಿ ಗೊತ್ತಿಲ್ಲ. 1 ನೇ ಎದುರುದಾರರು ಅರ್ಜಿದಾರರಾದ ಸಂತೋಷರವರನ್ನು ಯಾವತ್ತೂ ಸಹ ಕೆಲಸಕ್ಕೆ ಕರೆದುಕೊಂಡು ಹೋಗಿಲ್ಲ, ಅದೇ ರೀತಿ ವಿವಾದಿತ ಘಟನಾ ದಿನದಂದು ಸಹ 1 ನೇ ಎದುರುದಾರರು ಅರ್ಜಿದಾರರನ್ನು ಕೆಲಸಕ್ಕೆ ಕರೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. ಟ್ರೈಲರ್‌ನ ಬಣ್ಣ ಮತ್ತು ಆರ್.ಸಿ. ಸಂಖ್ಯೆ ಗೊತ್ತಿಲ್ಲ. ಸದರಿ ಟ್ರೈಲರ್ ಯಾರಿಗೆ ಸೇರಿದ್ದು ಎಂದು ಸಹ ಗೊತ್ತಿಲ್ಲ. ಟ್ರಾಕ್ಟರ್‌ನ ಇಂಜಿನ್ ಸಂಖ್ಯೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನಾನು ಟ್ರಾಕ್ಟರ್‌ನ್ನು ನೋಡಿಲ್ಲ ಎಂದು ಹೇಳುತ್ತಾರೆ. ಘಟನೆಯ ಕುರಿತು ನನಗೆ ಯಾವುದೇ ಮಾಹಿತಿ ಇಲ್ಲದಿದ್ದಾಗ್ಯೂ, ಅರ್ಜಿದಾರರ ಮಾತನ್ನು ಕೇಳಿಕೊಂಡು ಮತ್ತು ಅರ್ಜಿದಾರರು ನನ್ನ ಸೋದರ ಸಂಬಂಧಿಕರಾದ ಕಾರಣ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರ ಜಮೀನಿನಲ್ಲಿ ವಿದ್ಯುತ್ ಪರಿವರ್ತಕವನ್ನು ಅಳವಡಿಸಿದ್ದು, ಸದರಿರವರ ಜಮೀನಿನಲ್ಲಿ ಇರುವ ವಿದ್ಯುತ್ ಪರಿವರ್ತಕದಿಂದ ನಾವೂ ಸಹ ವಿದ್ಯುತ್ ಸಂಪರ್ಕವನ್ನು ಪಡೆದಿದ್ದು, ಹಾಗಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರು ಬೈಕಿನಿಂದ ಡಿಕ್ಕಿಪಡಿಸಿದ ಕಾರಣ ಗಾಯಗೊಂಡಿರುತ್ತಾರೆ ಎಂಬ ವಿಚಾರ ನನಗೆ ಗೊತ್ತಿದ್ದರೂ ಸಹ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : 2 ನೇ ಎದುರುದಾರರ ಪರ ಶ್ರೀ ಬಿ.ಎನ್.ಪಿ. ವಕೀಲರಿಂದಃ**

2 ನೇ ಎದುರುದಾರರ ಪರ ವಕೀಲರು 1 ನೇ ಎದುರುದಾರರ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

**ಮರುವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ